# ಪೇಪರ್ ಚಿತ್ತಾರದ ಹುಡುಗ!



ವೀಡಿಯೋಗೇಮ್, ಮೊಬೈಲ್ ಎಂದು ಕ್ರಿಯಾಶೀಲತೆಯನ್ನೇ ಮರೆತು ಕುಳಿತಿರೋ ಈಗಿನ ಮಕ್ಕಳಲ್ಲಿ ಅಪರೂಪ ಎನ್ನುವಂತಿದ್ದಾನೆ ಈ ಚಿತ್ತಾರದ ಹುಡುಗ ಪ್ರಮತ್. ತನ್ನ ಶಾಲಾ ಅಭ್ಯಾಸದ ಬಿಡುವಿನ ವೇಳೆ ಹಾಗೂ ರಜಾ ದಿನಗಳಲ್ಲಿ ಈತನ ಕೈಚಳಕದಲ್ಲಿ ಅರಳಿರೋ ಈ ಪೇಪರ್ ಚಿತ್ತಾರಗಳನ್ನು ನೋಡಿದರೆ ವಾಹ್ ಎನ್ನಿಸದೇ ಇರದು.

ಶಿರಸಿ ತಾಲ್ಲೂಕಿನ ಹೊಸ್ಮನೆ ಊರಿನ ಈ ಪ್ರಮತ್ ಬಾಳೇಸರ ಸರ್ಕಾರಿ ಶಾಲೆಯಲ್ಲಿ 4ನೇ ತರಗತಿಯಲ್ಲಿ ಓದುತ್ತಿದ್ದಾನೆ. ಅಂಗನವಾಡಿಗೆ ಹೋಗುತ್ತಿರುವಾಗಿನಿಂದಲೂ ಯಾವುದೇ ವಿಶೇಷ ತರಬೇತಿಗಳಿಲ್ಲದೇ ಸ್ವಂತ ಆಲೋಚನೆಯ ಕ್ರಿಯಾಶೀಲತೆಯಿಂದ ಅದೆಷ್ಟೋ ಬಗೆಯ ಚಿತ್ತಾರಗಳನ್ನು ರಚಿಸಿ ಜೋಪಾನವಾಗಿ ಇಟ್ಟುಕೊಂಡಿದ್ದಾನೆ. ಎಲೆಮರೆಯ ಕಾಯಿಯಂತಿರುವ ಅಪ್ಪಟ ಗ್ರಾಮೀಣ ಪ್ರತಿಭೆಯಾದ ಈ ಪ್ರಮತ್‌ನಿಗೆ ಇನ್ನಷ್ಟು ಪ್ರೋತ್ಸಾಹದ ಅವಶ್ಯಕತೆಯಿದೆ.

ಇತ್ತೀಚೆಗೆ ಶಿರಸಿಯ ಟಿ.ಎಸ್.ಎಸ್ ಸಂಸ್ಥೆಯ ಸಮಾರಂಭದಲ್ಲಿ ಈತನ ಕಾಗದದ ಚಿತ್ತಾರಗಳ ಪ್ರದರ್ಶನ ನೋಡುಗರ ಗಮನ ಸೆಳೆಯಿತು.

**-ಎನ್. ಆರ್. ಹೆಗಡೆ ಬೊಮ್ನಳ್ಳಿ, ಶಿರಸಿ**





# ನೈಸರ್ಗಿಕ ಪೆನ್ ಸ್ಟ್ಯಾಂಡ್

ನಾವು ಮನೆಯಲ್ಲಿ ಹಾಗೂ ಕಚೇರಿಗಳಲ್ಲಿ ಉಪಯೋಗಿಸುವ ಪೆನ್ ಸ್ಟ್ಯಾಂಡ್‌ಗಳನ್ನು ಕಟ್ಟಿಗೆ, ಪ್ಲಾಸ್ಟಿಕ್, ತಗಡು ಮುಂತಾದ ವಸ್ತುಗಳಿಂದ ತಯಾರಿಸುವುದು ಸಾಮಾನ್ಯ. ಆದರೆ ಈ ಚಿತ್ರದಲ್ಲಿ ಕಾಣುವ ಪೆನ್ ಸ್ಟ್ಯಾಂಡನ್ನು ಯಾರೂ ಕೈಯಿಂದ ತಯಾರಿಸಿದ್ದಲ್ಲ. ಗುಡ್ಡದಲ್ಲಿ ಸಿಕ್ಕಿದ ಹಲವಾರು ರಂಧ್ರಗಳನ್ನು ಒಳಗೊಂಡ ಸಾಮಾನ್ಯ ಕಲ್ಲೊಂದನ್ನು ಇಲ್ಲಿ ಪೆನ್‌ಸ್ಟ್ಯಾಂಡ್ ಆಗಿ ಬಳಕೆ ಮಾಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಶೆಟಗೇರಿ ಸತ್ಯಾಗ್ರಹ ಸ್ಮಾರಕ ವಿದ್ಯಾಲಯದ ವಿದ್ಯಾರ್ಥಿಗಳು ಶಾಲಾ ವಸ್ತು ಪ್ರದರ್ಶನದಲ್ಲಿ ಈ ವಸ್ತುವನ್ನು ಪ್ರದರ್ಶಿಸಿ ನೈಸರ್ಗಿಕ ವಸ್ತುಗಳ ಬಳಕೆಯ ಬಗ್ಗೆ ಗಮನ ಸೆಳೆದಿದ್ದಾರೆ.

**-ಜಿ.ಪ್ರೇಮಾನಂದ, ಅಂಕೋಲಾ**

# ಬಾಳಿಕೆ ಬರುವ ಮೊರ

ಈ ಅಕ್ಕಿ ಶುಚಿ ಮಾಡುವ ಮೊರ ಉತ್ತರ ಕರ್ನಾಟಕದ್ದು. ಇದರ ವಿಶೇಷವೆಂದರೆ, ಹತ್ತಿ ಬಟ್ಟೆಯನ್ನು ಸುಟ್ಟು ಅದರ ಬೂದಿಗೆ ಕುಸುಬೆ ಎಣ್ಣೆಯನ್ನು ಮಿಶ್ರ ಮಾಡಿ ಹೆಬ್ಬೆರಳಿನ ಸಹಾಯದಿಂದ ಮೊರವನ್ನು ನಯವಾಗಿ ಸಾರಿಸಿ, ಅಟ್ಟದ ಮೇಲೆ ಆರಲು ಬಿಡಬೇಕು. ಚೆನ್ನಾಗಿ ಆರಲು ಇದು ತೆಗೆದುಕೊಳ್ಳುವ ಸಮಯ ಸುಮಾರು ಒಂದು ವರ್ಷ. ಕೈಯಲ್ಲಿ ಹಿಡಿದರೆ ಕಂಚಿನ ಪಾತ್ರೆಯನ್ನು ಹಿಡಿದ ಅನುಭವ. 60 ರಿಂದ 70 ವರ್ಷಗಳ ಕಾಲ ಬಾಳಿಕೆ ಬರುತ್ತದಂತೆ. ಈ ಚಿತ್ರದಲ್ಲಿ ಕಾಣುವ ಮೊರ ಸುಮಾರು 35 ವರ್ಷ ಹಳೆಯದು.

**-ವರಲಕ್ಷ್ಮಿ ಮುಕುಂದರಾವ್, ಬೆಂಗಳೂರು**

